ಶ್ರೀ ಆರ್. ವಿ. ದೇಶಪಾಂಡೆ : ಇದು ಫೈನಾನ್ಷಿಯಲ್ ಬಿಲ್ ತಾವು ಎಲ್ಲಾ ಎಕ್ಸ್‌ಪರ್ಟ್ಸ್ ಇದ್ದೀರಿ ಮಾತನಾಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ದೇಶಪಾಂಡೆಯವರೇ, 600 ಕೋಟಿ ರೂ. ಚಿಲ್ಲರೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಇಟ್ಟು ಒಂದು ನಿಮಿಷಕ್ಕೆ ಏನೂ ನೋಡದಂತೆ ಪಾಸ್ ಮಾಡಿ ಅಂದರೆ ಹೇಗೆ ಅವತ್ತು ಸೇರಿಸದೆ ಇವತ್ತು ಸೇರಿಸಿರುವುದು. ದಯವಿಟ್ಟು ಕಾಲಾವಕಾಶ ಕೊಡಿ. ಮಧ್ಯಾಹ್ನ ಫಿಕ್ಸ್ ಮಾಡಿ ಕೊಡಿ ಸಾರ್ ಒಂದು ಅರ್ಧ ಗಂಟೆ.

ಉಪಾಧ್ಯಕ್ಷರು : ನೀವು ತಯಾರಿ ಇಲ್ಲದಿದ್ದರೂ ಮಾತನಾಡುವಷ್ಟು ಸಾಮರ್ಥ್ಯ ಇದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಯಾವ ಯಾವುದರಲ್ಲಿ ಎಷ್ಟೇಷ್ಟು ಇದೆ ಎನ್ನುವುದು ನೋಡುವುದು ಬೇಡವೆ? ಸುಮ್ಮನೆ ಮಾತನಾಡುವುದ ಕ್ಕಾಗುತ್ತದೆಯೇ?

ಉಪಾಧ್ಯಕ್ಷರು : ಮಾನ್ಯ ಜಗದೀಶ ಶೆಟ್ಟರ್, ನೀವೇನಾದರೂ ಮಾತನಾಡುತ್ತೀರಾ? ಇನ್ನೂ ಅರ್ಧ ಗಂಟೆ ಟೈಮ್ ಇದೆಯಲ್ಲಾ.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಚಾರ ಚರ್ಚೆ ಮಾಡಬೇಕಾಗುತ್ತದೆ. ಮಧ್ಯಾಹ್ನ ತೆಗೆದುಕೊಳ್ಳಿ.

ಉಪಾಧ್ಯಕ್ಷರು . ಈಗ ಸಮಯ ಒಂದು ಗಂಟೆ

ಶ್ರೀ ಜೆ. ಸಿ. ಮಾಧುಸ್ವಾಮಿ : ಆಗಲಿ ಬಿಡಿ ಸಾರ್, ಊಟ ಮಾಡಿ ಬಂದು ಚರ್ಚೆ ಮಾಡೋಣ.

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಪಟ್ಟ 3 ಬಿಲ್‌ಗಳು ಇವೆ. ಅದನ್ನು 10 ನಿಮಿಷದಲ್ಲಿ ತೆಗೆದುಕೊಳ್ಳಬಹುದು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ತೆಗೆದುಕೊಂಡರೆ ಮಾನ್ಯ ಸಚಿವರು ಉಳಿದವರು ಬರಬೇಕಾಗುತ್ತದೆ. ಅದಕ್ಕೆ ಕಾಲಾವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಊಟದ ನಂತರ ಪ್ರಶ್ನೋತ್ತರ ತೆಗೆದುಕೊಳ್ಳಿ, ಈಗ ಏನು 3 ಬಿಲ್‌ಗಳು ಉಳಿದಿವೆ ಅವು ಬಹಳ ಸಣ್ಣ ಬಿಲ್‌ಗಳು ಅವುಗಳನ್ನು ತೆಗೆದುಕೊಳ್ಳಿ.

ಶ್ರೀ ತನ್ವೀರ್ ಸೇಠ್ : (ಕಾರ್ಮಿಕ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ಗಳನ್ನು ಕಳೆದ ತಿಂಗಳು 13ನೇ ತಾರೀಖು ಮಂಡಿಸಿದ್ದೇನೆ.

5. ಶಾಸನ ರಚನೆ.

ಅ. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ 2005.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು : ವಿಧೇಯಕದ ಬಗ್ಗೆ ವಿವರಣೆ ಕೊಡಿ.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಹಾಗೂ ಹಜ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ವಿಧೇಯಕ . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಕಾಪಿ ಕೊಟ್ಟಿಲ್ಲ ಒಬ್ಬರ ಹತ್ತಿರವೂ ಕಾಪಿ ಇಲ್ಲ.

ಉಪಾಧ್ಯಕ್ಷರು : ಅಜೆಂಡಾದಲ್ಲಿ ಹೋಗಿದೆಯಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಕಳೆದ ತಿಂಗಳು 13ನೇ ತಾರೀಖು ಕಳುಹಿಸಿದ್ದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಕಳೆದ ತಿಂಗಳು 13ನೇ ತಾರೀಖು ಈ ವಿಧೇಯಕ ಸದನದಲ್ಲಿ ಮಂಡಿಸಿರುವುದು ಅದರ ಕಾಪಿಗಳನ್ನು ನಿಮ್ಮ ಆಫೀಸ್ ಇಡಬೇಕು ಇಲ್ಲಿ. ಅದೇ ಸೆಕ್ರೆಟರಿಗಳ ಕೆಲಸ ಮತ್ತೆ ಇವರು ಏನು ಮಾಡುತ್ತಾರೆ? ಅಜೆಂಡಾದಲ್ಲಿ ಏನೇನು ವಿಷಯ ಇರುತ್ತದೆ ಅದರ ಕಾಪಿಗಳು ಇಲ್ಲಿ ಇಡದಿದ್ದರೆ ಅದು ನಮಗೆ ಸಿಗದಿದ್ದರೆ ನಾವು ಮಾತನಾಡುವುದಕ್ಕೆ ಆಗುತ್ತದೆಯೇ? ನಿನ್ನೆ ಕಳುಹಿಸಿರುವುದಲ್ಲ ಒಂದು ತಿಂಗಳಾಗಿದೆ ಇದನ್ನು ಮಂಡಿಸಿ.

ಉಪಾಧ್ಯಕ್ಷರು : ಕಳುಹಿಸಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಒಂದು ತಿಂಗಳ ಹಿಂದೆ ಕಳುಹಿಸಿದ್ದಾರೆ. ನಾವು ದಿನಾ ಅದನ್ನು ಹೊತ್ತುಕೊಂಡು ಬರುವುದಕ್ಕೆ ಆಗುತ್ತದೆಯೇ?

ಉಪಾಧ್ಯಕ್ಷರು : ಕಾಪಿ ಕೊಡುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಕೊಡಲಿ ಸಾರ್ ನಾವು ನೋಡುವುದಾದರೂ ಬೇಡವೇ ?

ಶ್ರೀ ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ತಿದ್ದುಪಡಿ ವಿಧೇಯಕಕ್ಕೆ ಅದರಲ್ಲಿ ಅಧಿನಿಯಮ 4ನೇ ಪ್ರಕರಣಕ್ಕೆ ತಿದ್ದುಪಡಿತರುವಂತಹ ಉದ್ದೇಶ ಪ್ರತಿಯೊಂದು ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳು ಪ್ರತಿ ವರ್ಷಕ್ಕೆ ಒಮ್ಮೆ ನೋಂದಾಯಿಸಿ, ನವೀಕರಿಸಿಕೊಳ್ಳುವ ಅವಕಾಶ ಇರುತ್ತದೆ. ಇದರಲ್ಲಿ ಕಾರ್ಮಿಕ ನಿರೀಕ್ಷಕರು ಮಾಡುವಂತಹ ವಿಳಂಬಕ್ಕೆ ಕಡಿವಾಣ ಹಾಗೂ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಮಗೆ ಆ ಬಿಲ್ ಕಾಪಿ ಕೊಟ್ಟಿಲ್ಲ. ನಮಗೆ ಕೊಟ್ಟಿರುವ ಕಾಪಿ ದಿ ಇಂಡಸ್ಟ್ರೀಯಲ್ ಎಂಪ್ಲಾಯ್‌ಮೆಂಟ್ ಸ್ಟ್ಯಾಂಡಿಂಗ್ ಆರ್ಡರ್ಸ್ ಕರ್ನಾಟಕ (ಅಮೆಂಡ್‌ಮೆಂಟ್) ಬಿಲ್

ಶ್ರೀ ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೆ, ಪ್ರತಿಯೊಂದು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ತಮ್ಮ ಸಂಸ್ಥೆಯನ್ನು ನೋಂದಾಯಿಸಿ 5 ವರ್ಷಕ್ಕೊಮ್ಮೆ ನವೀಕರಿಸುವಂತಹ ಅವಕಾಶ ಈ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ 4ರ ಒಂದು ಅಡಿಯಲ್ಲಿ ಏನಿತ್ತು ಅದನ್ನು ನವೀಕರಿಸುವಂತಹ ಸಂದರ್ಭದಲ್ಲಿ ಏನಾಕಾರಣ ಆಗುವಂತಹ ವಿಳಂಬ ಅದನ್ನು ತಡೆಯಲು ಹಾಗೂ ನಿಗದಿತ

ಅವಧಿಯಲ್ಲಿ ನವೀಕರಣ ಆಗಬೇಕು ಎನ್ನುವುದೇ ನಮ್ಮ ಉದ್ದೇಶ. ಮೂವತ್ತು ದಿವಸಗಳೊಳಗಾಗಿ ನವೀಕರಣ ಮಾಡದೆ ಇರಲು ಕಾರಣಗಳನ್ನು ತಿಳಿಸಲು ತಪ್ಪಿದರೆ, ಇದನ್ನು ನೊಂದಾಯಿಸಲಾಗಿದೆ ಅಥವಾ ನವೀಕರಿಸಲಾಗಿದೆ ಎಂದು ಭಾವಿಸ ತಕ್ಕದೆಂದು ನಾವು ಈ ತಿದ್ದುಪಡಿಯನ್ನು ತರುವ ಮೂಲಕ ತಂದಿದ್ದೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಇದನ್ನು ನಾನು ಸ್ವಾಗತಿಸುತ್ತೇನೆ, ಏಕೆಂದರೆ, ನವೀಕರಣ ಮಾಡುವುದಕ್ಕೆ ಸುಮ್ಮನೆ ಇಟ್ಟುಕೊಂಡು ಡಿಲೇ ಮಾಡುವುದರಲ್ಲಿ ಅರ್ಥವಿಲ್ಲ, ಏನು ಮಂತ್ರಿಗಳು ತಿದ್ದುಪಡಿಯನ್ನು ತಂದಿದ್ದಾರೆ, ಇದು ವ್ಯಾಪಾರಸ್ಥರಿಗೆ ಅನುಕೂಲವಾಗುವ ತಿದ್ದುಪಡಿ ಇದನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ವಕ್ಫ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದು ಪಡಿ) ವಿಧೇಯಕ 2005 ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, " 2005 ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ಈ ವಿಧೇಯಕ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ 2005 ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "2005 ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು